ಕರ್ನಾಟಕ ವಿಧಾನಸಭೆ

ಮಂಗಳವಾರ 20ನೇ ಜೂನ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ: ಬಸ್ ದರ ಏರಿಕೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಬಸ್ ದರ ಏರಿಕೆಯ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು, ಬಸ್ ದರವನ್ನು ತೀವ್ರವಾಗಿ ಏರಿಸಿದ್ದಾರೆ, ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಸ್ ದರ ಏರಿಸಿದ್ದಾರೆ. ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

2. ಕಾಂಗ್ರೆಸ್ ಸದಸ್ಯರ ಧರಣಿ.

ವಿಷಯ: ನಿಲುವಳಿ ಸೂಚನೆಗೆ ಅನುಮತಿ ನೀಡಲು ಒತ್ತಾಯ.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ನಿಂತರು)

ಶ್ರೀ ಕೆ.ಎನ್. ರಾಜಣ್ಣ: ರಾಷ್ಟ್ರೀಯ ಪಕ್ಷದ ಸದಸ್ಯರಾಗಿದ್ದುಕೊಂಡು, ಸ್ಪೀಕರ್‌ರವರ ನಿರ್ಣಯವನ್ನು ಪ್ರಶ್ನೆ ಮಾಡುವ ಕೆಲಸವನ್ನು ಮಾಡುತ್ತಿದ್ದೀರಿ; ನಿಮಗೆಲ್ಲಾ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ಸದಸ್ಯರು ಏತಕ್ಕೆ ಈ ವೆಲ್‌ನೊಳಗೆ ಬಂದ್ದೀದ್ದೀರೆಂಬುದು ನನಗೆ ಅರ್ಥವಾಗುತ್ತಿಲ್ಲ, ಏಕೆಂದರೆ ನೀವೇನು ನಿನ್ನೆ ನಿಲುವಳಿ ಸೂಚನೆಯನ್ನು ತಂದಿದ್ದರೋ, ಅದು ನಿಯಮಾವಳಿ ಪ್ರಕಾರ ಲ್ಯಾಪ್ಸ್ ಆಗಿದೆ, ಇವತ್ತು ನಿಯಮ 69ರ ಕೆಳಗಡೆ ನಾನು ಕನ್ಸರ್ಟ್ ಮಾಡಿ ಮಾತನಾಡಲು ನಿಮಗೆ ಅವಕಾಶ ಮಾಡಿಕೊಟ್ಟಿದ್ದೆ, ಇವತ್ತು ಲೀಸ್ಟ್ ಆಫ್ ಬಿಸನೆಸ್‌ನಲ್ಲಿದೆ, ದಯಮಾಡಿ ಮಾನ್ಯ ಸದಸ್ಯರು ತಮ್ಮ ತಮ್ಮ ಆಸನಗಳಿಗೆ ತೆರಳಿ ಅದರ ಮೇಲೆ ಚರ್ಚೆ ಆರಂಭ ಮಾಡಬೇಕು. ಆಟೊಮ್ಯಾಟಿಕ್ ಆಗಿ ನಿಮ್ಮ ನಿಲುವಳಿ ಸೂಚನೆ ಲ್ಯಾಪ್ಸ್ ಆಗಿ ಹೋಯಿತು. ಅದು ನಿನ್ನೆಯೇ ಲ್ಯಾಪ್ಸ್ ಆಗಿದೆ. ಆ ಕಾರಣದಿಂದ ತಾವು ದಯಮಾಡಿ ನೀವು ಈ ರೀತಿಯಲ್ಲಿ ಸದನದ ಕಲಾಪಕ್ಕೆ ಅಡ್ಡಿ ಮಾಡುವುದು

ಗೌರವ ತರತಕ್ಕಂಥದ್ದಲ್ಲ. ನಿಯಮಾವಳಿಗಳ ಪ್ರಕಾರ ಇವತ್ತು ನಿಮ್ಮ ನಿಲುವಳಿ ಸೂಚನೆ ಬೇರೆ ರೂಪದಲ್ಲಿ ಇದೆ. ಇವತ್ತು ಲಿಸ್ಟ್ ಆಫ್ ಬಿಸಿನೆಸ್‌ನಲ್ಲಿ ಅದು ನಿಯಮ 69ರ ಕೆಳಗಡೆ ಇದೆ. ಈಗ ಅದನ್ನು ತೆಗೆದುಕೊಳ್ಳೋಣ. ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ನಮ್ಮನ್ನು ಕರೆಸಿ ಚರ್ಚೆಯನ್ನು ಮಾಡುತ್ತೇವೆಂದು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ನಿನ್ನೆ ನಿಮ್ಮ ಆಫೀಸಿನಿಂದ ಜಂಟಿ ಕಾರ್ಯದರ್ಶಿಗಳವರು ಬಂದಿದ್ದರು. ನಾಳೆ 11 ಗಂಟೆಗೆ ತಾವು ಸಭೆಯನ್ನು ಕರೆದಿದ್ದಾರೆಂದು ಹೇಳಿದರು. ಅದರಂತೆ ನಿಮ್ಮೆಲ್ಲರನ್ನು ಕರೆಸಬೇಕಾಗಿತ್ತು. ಕರೆದು ಮಾತನಾಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು: ಆ ಪ್ರಶ್ನೆ ಬೇರೆಲ್ಲ. ನಿಮ್ಮ ನಿಲುವಳಿ ಸೂಚನೆ ಏನು ಇದೆ, ಆಟೊಮ್ಯಾಟಿಕಲಿ ಅದು ಲ್ಯಾಪ್ಸ್ ಆಗಿದೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ನೀವು ಈ ರೀತಿ ಮಾಡಿದರೆ ನಾವು ಸಭೆಯನ್ನು ನಡೆಸುವುದಕ್ಕೆ ಬಿಡುವುದಿಲ್ಲ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಸದನವನ್ನು ನಡೆಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ನಾನು ನಿಯಮಾವಳಿ ಪ್ರಕಾರ ಸಭೆಯನ್ನು ನಡೆಸಬೇಕಾಗುತ್ತದೆ. ನಿಯಮಾವಳಿಗಳ ಪ್ರಕಾರವೇ ಅದು ಲ್ಯಾಪ್ಸ್ ಆಗಿದೆ. ಈಗ 69ರ ಕೆಳಗಡೆ ತೆಗೆದುಕೊಂಡಿದ್ದೇನೆ. ಅದನ್ನು ಸ್ಪಷ್ಟವಾಗಿ ನಾನು ಈಗಾಗಲೇ ಹೇಳಿದ್ದೇನೆ. ಇವತ್ತು ಲಿಸ್ಟ್ ಆಫ್ ಬಿಸಿನೆಸ್‌ನಲ್ಲೂ ಅದು ಇದೆ. ಅದಕ್ಕೆ ತಾವುಗಳು ಸಹಕರಿಸಬೇಕು.

***ಶ್ರೀ ಎನ್. ಧರ್ಮಸಿಂಗ್:** ಹೇಳಿದರೆ ಅದನ್ನು ಕೇಳುವುದಕ್ಕೆ ನಾವು ತಯಾರು ಇಲ್ಲ.

ಅಧ್ಯಕ್ಷರು: ಒಂದೇ ಸಮನೆ ನೀವು ಈ ರೀತಿ ಮಾಡಿದರೆ ಯಾರಿಗೂ ಶೋಭೆ ತರುವುದಿಲ್ಲ. ಯಾರಿಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲವೆಂದು ತೋರಿಸಿದಂತಾಗುತ್ತದೆ. Being opposition leader you should not speak like that ನಮ್ಮ ನಿಯಮಾವಳಿಗಳ ಪ್ರಕಾರ ನಾನು ಸಭೆಯನ್ನು ನಡೆಸಬೇಕಾಗಿದೆ. ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಡಬೇಕು.

---

* ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

(ಸದನವು 11–43 ಗಂಟೆಗೆ ಮುಂದೂಡಲ್ಪಟ್ಟು 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ 1 ಗಂಟೆ 40 ನಿಮಿಷಕ್ಕೆ ಪ್ರಾರಂಭವಾಯಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಈಗ ಸದನವನ್ನು 4–00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 4 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮತ್ತೆ 5 ಗಂಟೆ 54 ನಿಮಿಷಕ್ಕೆ ಪ್ರಾರಂಭವಾಯಿತು)

ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 5 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿ: 21.06.2006 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

* * * * *